# ಅಪ್ಪ

ಅಪ್ಪ
ನನಗೆ ಮರಣದಂಡನೆ ವಿಧಿಸು
ಆದರಿಂದ ನೀನು ನನ್ನ ಬಾಡಿಗೆಯಿಲ್ಲದ
ನಿರ್ಜನ ದೇಹದೊಳಗೆ ವಾಸಿಸಬಹುದು
ಮತ್ತೆ ಸ್ವಂತ ಸಮಾಧಿಯ ಆಗತ್ಯವು ನಿನಗೆ ಬೀಳಲಾರದು

ಒಂಟಿತನದ ಗೀಳುಳ್ಳ ಜನ
ಮದುವೆಯಾಗಲು ಒಪ್ಪಿ ಬರಲಾರರು ಇನ್ನ
ಮತ್ತೆ ನಿನ್ನ ಪಾಲಿನ ಯಾವ ಹೆಂಗಸರೂ ಈಗಿಲ್ಲ
ದ್ವೇಷಿಸು ಕೇವಲ ನನ್ನ

ಅಪ್ಪ
ನೀನು ನನ್ನನ್ನು ರಸದ ಹಾಸಿಗೆಯನ್ನಾಗಿ ಮಾಡಿಕೋ
ನನಗೇ ಅರಸನಾಗು
ನಾನು ಅದುಮಿ ಹಿಡಿಯಲ್ಪಟ್ಟಾಗ
ಕಬಂಧ ಬಾಹುವಿನ ಅಡಿಯಲ್ಲಿ
ನನಗೇನೂ ಗೊತ್ತಿಲ್ಲದಿರುವ ಹಾಗೆ
ನಿಮ್ಮಿಬ್ಬರ ಬಗ್ಗೆ
ಅಮ್ಮನಿಗೂ ನನ್ನ ಬಗ್ಗೆ ಏನೂ ಗೊತ್ತಿರಲಾರದು

ಗುಂಡು ಹಾರಿಸಬೇಡಿ
ಒಂದು ಮುತ್ತು ಈ ಗಡಿಜಗಳವನು ದಾಟಿ ಹೋದ
ಇತಿಹಾಸವಿಲ್ಲ

ಹಿತಶತ್ರುಗಳು
ಬೆಚ್ಚಿಬೀಳಿಸುವ ಅಪಾಯವನ್ನು
ಅದ್ದೇಗೆ ಇನ್ನೂ ಹೆಚ್ಚು ರೋಚಕಗೊಳಿಸುತ್ತಾರೋ
ಸಾವು ನಾವು ಅಂದುಕೊಂಡದ್ದಕ್ಕಿಂತ
ಹೆಚ್ಚು ಮಹತ್ವದ್ದೆಂದು ಇಲ್ಲಿ ಯಾರಿಗೂ ಅನಿಸುತ್ತಿಲ್ಲ

ಅಪ್ಪ
ಕನಸು ಎಚ್ಚೆತ್ತುಕೊಳ್ಳುವ ಸಮಯ ಬಂತು
ಈ ಕನಸಿನಿಂದ ಮತ್ತೆಂದೂ ಏಳಲಾರೆನೆಂದು
ಗೊತ್ತಿದ್ದರೂ
ನನ್ನೀ ಇಪ್ಪತ್ತೊಂದನೇ ತುಂಬು ಪ್ರಾಯದಲಿ
ಹಾಸಿಗೆಗೆ ಮರಳಿ ಹೋಗಲೇಬೇಕಿದೆ ನಾನು
ನಿದಿರೆಯಿಂದ ಆ ಇನ್ನೊಂದು ನಿದಿರೆಗೆ
ಶಾಶ್ವತವಾಗಿ ಇಲ್ಲ ತಾತ್ಕಾಲಿಕವಾಗಿ

